


# ಒಳ್ಳೆಯವಳಾಗ್ತಾಳಂತೆ ಪೂನಂ!

ಬಾಲಿವುಡ್‌ಗೆ ಕಾಲಿಡುವ ಮುನ್ನವೇ ವಿವಾದಗಳಿಂದಲೇ ಪ್ರಚಾರ ಪಡೆದವಳು ಪೂನಂ ಪಾಂಡೆ. ಒಂದಷ್ಟು ಕಾಲ ಟ್ವಿಟರ್, ಫೇಸ್‌ಬುಕ್‌ಗಳಲ್ಲಿ ತನ್ನ ಅರೆನಗ್ನ ಚಿತ್ರಗಳನ್ನು ಹಾಕುವ ಮೂಲಕ ಪಡ್ಡೆ ಹುಡುಗರ ನಿದ್ದೆಗೆಡಿಸಿದ್ದ ಪೂನಂಳ ಆಟಾಟೋಪಗಳು ಸದ್ಯಕ್ಕೆ ಬಂದ್ ಆಗಿವೆ. ಬಾಲಿವುಡ್‌ನಲ್ಲಿ ಆಕೆಯ ಅದೃಷ್ಟ ಖುಲಾಯಿಸಿಲ್ಲ. ತನ್ನ ದೆಸೆ ಬದಲಾಗಲಿದೆ ಎಂಬ ವಿಶ್ವಾಸ ಹೊಂದಿರುವ ಆಕೆ, ಪ್ರಚಾರಕ್ಕಾಗಿ ತಾನು ಮಾಡಿದ ತಂತ್ರಗಳನ್ನು ಸಮರ್ಥಿಸಿಕೊಂಡಿರುವುದು ಹೀಗೆ,

'ನಾನು ಯಾವುದೇ ಸಿನಿಮಾ ಹಿನ್ನೆಲೆಗೆ ಸೇರಿದವಳಲ್ಲ. ಕಪೂರ್ ಅಥವಾ ಖಾನ್ ಕುಟುಂಬದವಳೂ ಅಲ್ಲ. ನಾನು ಕಠಿಣ ಪರಿಶ್ರಮಜೀವಿ. ನನ್ನ ಪರಿಶ್ರಮದಿಂದಲೇ ಇಲ್ಲಿವರೆಗೂ ಬಂದಿದ್ದೇನೆ. ನಿಜ, ಬೆಳಕಿಗೆ ಬರಬೇಕೆಂದು ನಾನೇ ವಿವಾದಗಳನ್ನು ಸೃಷ್ಟಿಸಿ ಬಳಸಿಕೊಂಡಿದ್ದೇನೆ. ಈಗ ನಾನು ಬೇರೆ ಏನಾದರೂ ಒಳ್ಳೆಯದನ್ನು ಮಾಡಬೇಕೆಂದು ಬಯಸಿದ್ದೇನೆ' ಎಂದಿದ್ದಾಳೆ ಪೂನಂ. ನಟನೆಯತ್ತ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. 'ದಿ ವೀಕೆಂಡ್' ಎಂಬ ಕಿರುಚಿತ್ರದಲ್ಲಿಯೂ ಆಕೆ ನಟಿಸಿದ್ದಾಳೆ. ಬಾಲಿವುಡ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಉತ್ತಮ ಮಹಿಳಾ ಕೇಂದ್ರಿತ ಸಿನಿಮಾಗಳು ಬರುತ್ತಿವೆ. ಜನ ಅವುಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ ಸಹ. ಹೀಗಿರುವಾಗ ನಾನೇಕೆ ವಿವಾದಗಳನ್ನು ಸೃಷ್ಟಿಸಬೇಕು? ಎಲ್ಲವೂ ಬದಲಾಗುತ್ತಿವೆ. ಈ ಹೊತ್ತಲ್ಲಿ ಉತ್ತಮ ಕೆಲಸಗಳನ್ನೇಕೆ ಮಾಡಬಾರದು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡು 'ಒಳ್ಳೆಯವಳಾಗುವ' ಸೂಚನೆ ನೀಡಿದ್ದಾಳೆ ಪೂನಂ.

# ವೃತ್ತಿ ಸೃಜನಶೀಲತೆಯೇ ಸವಾಲು

ಬಾಲಿವುಡ್ ಮತ್ತು ತಮಿಳು ಎರಡೂ ಕಡೆ ಅದೃಷ್ಟ ಅರಸುತ್ತಿರುವವರಲ್ಲಿ ಶೃತಿ ಹಾಸನ್ ಒಬ್ಬಳು. ಅಪ್ಪನ ಹೆಸರಿನ ಬೆಂಬಲ ಇದ್ದರೂ ಶೃತಿ ಇನ್ನೂ ಆರಕ್ಕೇರುವ ಲಕ್ಷಣ ಕಂಡುಬಂದಿಲ್ಲ. ಅತ್ತ ನಟನೆ, ಇತ್ತ ಗಾಯನ ಎರಡರಲ್ಲಿಯೂ ಶೃತಿ ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾಳೆ. 'ಸೃಜನಾತ್ಮಕ ವೃತ್ತಿಯೇ ದೊಡ್ಡ ಸವಾಲು' ಎನ್ನುವುದು ಶೃತಿ ಅಭಿಪ್ರಾಯ. 'ನಾನು ನನಗಾಗಿ ಕೆಲಸ ಮಾಡುವುದು ಮಾತ್ರವಲ್ಲ, ನನ್ನನ್ನು ಪ್ರೇಕ್ಷಕರು ಸ್ವೀಕರಿಸಿದಾಗ ಎಂಜಾಯ್ ಮಾಡುತ್ತೇನೆ. ನನ್ನ ಕಲಾ ಕೌಶಲವನ್ನು ಜನರು ಒಪ್ಪಿಕೊಂಡಾಗ ಮತ್ತು ಮೆಚ್ಚಿಕೊಂಡಾಗ ಖುಷಿಯಾಗುತ್ತದೆ. ಈ ದಾರಿಯೇ ಸವಾಲಿನದ್ದು' ಎಂದಿದ್ದಾಳೆ ಶೃತಿ.

'ನಾನು ಬಯಸಿದ್ದನ್ನೇ ಮಾಡಲು ಅವಕಾಶ ಸಿಕ್ಕಂತಹ ಕೆಲವೇ ಅದೃಷ್ಟವಂತರಲ್ಲಿ ನಾನೂ ಒಬ್ಬಳು ಎಂದು ಭಾವಿಸುತ್ತೇನೆ. ಕೆಲವು ಸಂಕಷ್ಟದ ಸಂದರ್ಭಗಳಲ್ಲಿ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿತ್ತು. ಆದರೂ ನನ್ನ ಹಾದಿಗಳು ಸುಗಮವಾಗಿದ್ದವು' ಎಂದಿದ್ದಾಳೆ.

'ನಾನು ಬಯಸಿದ್ದನ್ನು ಸಾಧಿಸಲು ನೆರವಾಗುವಂತೆ ಅನೇಕ ಸಲಹೆಗಳು ಆಯ್ಕೆಗಳು ನನಗೆ ದೊರೆತಿವೆ. ಕೆಲವೊಮ್ಮೆ ಅನುಮಾನವೇ ನಮಗೆ ಅದ್ಭುತ ಪ್ರೇರಣ ಶಕ್ತಿಯಾಗುತ್ತದೆ. ಏಕೆಂದರೆ ಅದು ಎಲ್ಲ ಅಡೆತಡೆಗಳನ್ನು ನಿವಾರಿಸುತ್ತದೆ ಮತ್ತು ನಿಮ್ಮಲ್ಲಿನ ಅತ್ಯುತ್ತಮವಾದುದ್ದನ್ನು ನೀಡುವ ಅವಕಾಶ ನೀಡುತ್ತದೆ' ಎಂದು ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದಾಳೆ ಶೃತಿ.

